**5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದ.ಕ. ಮಂಗಳೂರು,**
**ಕಾರ್ಯನಿರ್ವಹಣೆ ಪುತ್ತೂರು, ದ.ಕ.**

ಎಸ್.ಸಿ.ಸಂ. **5017/2018**

ಚಾ.ಸಾಃ 2 ಪ್ರಾ.ಸಾಃ 1

ದಿನಾಂಕಃ **08-11-2019** ರಂದು ಸಾಕ್ಷಿಯನ್ನು ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಸಾಕ್ಷಿದಾರರ ಹೆಸರುಃ **ಆಸಿರ್**

ತಂದೆಯ ಹೆಸರುಃ **ಆಲಿ ಕುಂಞ**

ವಯಸ್ಸು ಃ 17 ವರ್ಷ

ಉದ್ಯೋಗ ಃ ದ್ವಿತೀಯ ಪಿಯುಸಿ ವಿದ್ಯಾರ್ಥಿ

ವಾಸಸ್ಥಳ ಃ ಅಡೀಲು ಮನೆ, ಕುಕ್ಕಾಜೆ, ಪುತ್ತೂರು ತಾಲೂಕು.

---

ಮುಖ್ಯ ವಿಚಾರಣೆಃ ಮಾನ್ಯ ಪ್ರಭಾರ ಸರಕಾರಿ ಅಭಿಯೋಜಕರಿಂದಃ-

1. ನನಗೆ ಆರೋಪಿಗಳ ಪರಿಚಯ ಇಲ್ಲ. ನನಗೆ ಪ್ರಾ.ಸಾ.1 ಸಚ್ಚಿದಾನಂದರವರು ಗೊತ್ತು. ನನಗೆ ಚಾ.ಸಾ.6 ಕೊರಗಪ್ಪ ಗೌಡ ಗೊತ್ತಿಲ್ಲ.

2. ನನಗೆ ಈ ಕೇಸಿನ ಬಗ್ಗೆ ಏನೂ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ. ನನ್ನನ್ನು ಠಾಣೆಗೆ ಕರೆದುಕೊಂಡು ಹೋಗಿ ಖಾಲಿ ಪೇಪರಿಗೆ ನನ್ನ ಸಹಿಯನ್ನು ಹಾಕಿಸಿದರು. ಬೇರೆ ವಿಚಾರ ನನಗೆ ಗೊತ್ತಿಲ್ಲ. ಪೊಲೀಸರು ಯಾಕೆ ನನ್ನನ್ನು ಠಾಣೆಗೆ ಕರೆದುಕೊಂಡು ಹೋಗಿದ್ದರು ಎಂದು ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಪಿ.ಪಿ.ಯವರ ಕೋರಿಕೆ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಪ್ರಭಾರ ಸರಕಾರಿ ಅಭಿಯೋಜಕರಿಂದಃ-**

3. ದಿನಾಂಕಃ 15.11.2015 ರಂದು ಶಾಲೆಗೆ ರಜೆ ಇದ್ದುದರಿಂದ ಎಂದಿನಂತೆ ಬೆಳಿಗ್ಗೆ 7.00 ಗಂಟೆಗೆ ಪಳ್ಳಿ ಶಾಲೆಗೆ ಹೋಗುತ್ತಿದ್ದ ಸಮಯ ಕುಕ್ಕಾಜೆ ಕಡೆಯಿಂದ ನನಗೆ ಪರಿಚಯ ಇರುವ ಚಾ.ಸಾ.1 ರವರು ಈಶ್ವರಮಂಗಲದ ಕಡೆಗೆ ಹಾಲು ತೆಗೆದುಕೊಂಡು ಬರುತ್ತಿದ್ದರು, ನನ್ನನ್ನು ನೋಡಿ

ಅವರು ಮೋಟಾರ್ ಸೈಕಲನ್ನು ನಿಲ್ಲಿಸಿ ಬರುತ್ತೀಯಾ ಎಂದು ಕೇಳಿದರು ಎಂದರೆ ಸರಿಯಲ್ಲ. ನಾನು ಸಹಸವಾರನಾಗಿ ಚಾ.ಸಾ.1 ರವರ ಮೋಟಾರ್ ಸೈಕಲಿನಲ್ಲಿ ಕುಳಿತುಕೊಂಡು ಈಶ್ವರಮಂಗಲದ ಕಡೆಗೆ ಹೋಗುತ್ತಿದ್ದಾಗ ಪಂಚಮುಖಿ ಆಂಜನೇಯ ಆಶ್ರಮದ ಬಳಿ ತಲುಪಿದಾಗ ನಮ್ಮ ಎದುರಿನಿಂದ ನಂಬರ್ ಪ್ಲೇಟ್ ಇರದ ಜೀಪೊಂದು ಬರುತ್ತಿತ್ತು, ಆ ಜೀಪು ಚಾಲಕನು ಜೀಪನ್ನು ರಸ್ತೆಯ ಬಲಬದಿಗೆ ಚಲಾಯಿಸಿಕೊಂಡು ಬಂದು ಚಾ.ಸಾ.1 ರವರು ಚಲಾಯಿಸಿಕೊಂಡು ಹೋಗುತ್ತಿದ್ದ ಮೋಟಾರ್ ಸೈಕಲಿಗೆ ಗುದ್ದಿದರು, ಆಗ ಮೋಟಾರ್ ಸೈಕಲ್ ಚರಂಡಿಗೆ ಬಿತ್ತು ಎಂದರೆ ಸರಿಯಲ್ಲ. ನಾನು ಎದ್ದು ನೋಡುತ್ತಿದ್ದಂತೆ ಜೀಪನ್ನು ನಿಲ್ಲಿಸಿ ಅದರ ಚಾಲಕನ ಎಡಗಡೆ ಕುಳಿತಿದ್ದ ಒಬ್ಬರು ಮುಖಕ್ಕೆ ಶಾಲನ್ನು ಹೊದ್ದುಕೊಂಡು ಕೈಯಲ್ಲಿ ಕಬ್ಬಿಣದ ಪೈಪನ್ನು ಹಿಡಿದುಕೊಂಡು ಚಾ.ಸಾ.1 ರವರಿಗೆ ಹೊಡೆಯಲು ಬಂದರು ಎಂದರೆ ಸರಿಯಲ್ಲ. ಆಗ ಚಾ.ಸಾ.1 ರವರು ಬಿದ್ದಲ್ಲಿಂದ ಎದ್ದು ಓಡಿದಾಗ ಅವರ ಲುಂಗಿ ಬಿದ್ದಿತು, ಅಂಗಿ ಮತ್ತು ಚಡ್ಡಿಯಲ್ಲಿಯೇ ಗುಡ್ಡೆ ಕಡೆಗೆ ಓಡಿರುತ್ತಾರೆ ಎಂದರೆ ಸರಿಯಲ್ಲ. ಅಷ್ಟರಲ್ಲಿ ಅವರನ್ನು ಓಡಿಸಿಕೊಂಡು ಹೋದವರ ಮುಖಕ್ಕೆ ಹೊದ್ದಿದ್ದ ಶಾಲು ಅವರ ಕಾಲಿಗೆ ಸಿಕ್ಕಿ ಅವರು ನೆಲಕ್ಕೆ ಬಿದ್ದರು, ಬಿದ್ದಲ್ಲಿಂದ ಎದ್ದು ಚಾಲಕರಲ್ಲಿ ಅಣ್ಣ ಇವತ್ತು ಬಚಾವ್ ಆದ ಎನ್ನುತ್ತಾ ಜೀಪು ಹತ್ತಿ ಕುಕ್ಕಾಜೆ ಕಡೆಗೆ ಹೋದರು ಎಂದರೆ ಸರಿಯಲ್ಲ. ನಾನು ಜೀಪಿನಲ್ಲಿದ್ದವರನ್ನು ನೋಡಿ ಗುರುತಿಸಿದ್ದು, ಅದರ ಚಾಲಕನು ಈ ದಿನ ನ್ಯಾಯಾಲಯದಲ್ಲಿರುವ 1 ನೇ ಆರೋಪಿ ಸಿನೆಮಾ ನಟ ವಿನೋದ್ ಆಳ್ವ ಎಂದರೆ ಸರಿಯಲ್ಲ. ಚಾಲಕರ ಪಕ್ಕದಲ್ಲಿದ್ದವರು ಈ ದಿನ ನ್ಯಾಯಾಲಯದಲ್ಲಿರುವ 2 ನೇ ಆರೋಪಿಯಾಗಿರುತ್ತಾರೆ ಎಂದರೆ ಸರಿಯಲ್ಲ. ನಂತರ ಚಾ.ಸಾ.6 ರವರು ಬಂದರು, ಆಗ ಚಾ.ಸಾ.1 ರವರು ಗುಡ್ಡೆಯಿಂದ ಲುಂಗಿ ತೆಗೆದುಕೊಂಡು ಬಾ ಎಂದು ಕರೆದರು, ನಾನು ಲುಂಗಿಯನ್ನು ತೆಗೆದುಕೊಂಡು ಹೋಗಿ ಕೊಟ್ಟೆನು, ಮೋಟಾರ್ ಸೈಕಲ್ ಬಳಿ ಬಂದು ನಾನು ಮತ್ತು ಚಾ.ಸಾ.6 ಸೇರಿ ಮೋಟಾರ್ ಸೈಕಲನ್ನು ಎತ್ತಿದೆವು, ಆಗ ನನಗೆ ಕಾಲಿಗೆ ಗುದ್ದಿದ ಗಾಯವಾಗಿತ್ತು, ನಾನು ಯಾವುದೇ ಚಿಕಿತ್ಸೆಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿರುವ ಆರೋಪಿಗಳು ಚಾ.ಸಾ.1 ರವರನ್ನು ಜೀಪಿನಿಂದ ಗುದ್ದಿಸಿ ಕೊಲೆ ಮಾಡಲು ಪ್ರಯತ್ನಿಸಿರುವುದಾಗಿದೆ ಎಂದು ಈಗ ನನಗೆ ಓದಿ ಹೇಳಿದಂತೆ ಅಂದರೆ "ಅದರಂತೆ ನಿನ್ನೆ ದಿನಾಂಕಃ ... ... ... ... ... ... ...

... ಮಾಡಲು ಪ್ರಯತ್ನಿಸಿರುವುದಾಗಿದೆ.” ಎಂದು ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿ.ಪಿ.1 ಎಂದು ಗುರುತಿಸಲಾಯಿತು.

4. ನಂತರ ದಿನಾಂಕಃ 08.01.2016 ರಂದು ಠಾಣೆಯಲ್ಲಿ 2 ನೇ ಆರೋಪಿಯನ್ನು ಗುರುತಿಸಿ ಶಾಲು ಹೊದ್ದುಕೊಂಡು ಕೈಯಲ್ಲಿ ಕಬ್ಬಿಣದ ಪೈಪು ಹಿಡಿದುಕೊಂಡು ಚಾ.ಸಾ.1 ರವರಿಗೆ ಹೊಡೆಯಲು ಬಂದ ಆರೋಪಿ ಇವರೇ ಎಂದು ನನಗೆ ಈಗ ಓದಿ ಹೇಳಿದಂತೆ "ಈ ದಿನ ತನಿಖೆಗೆ ಬಂದು ... ... ... ... ... ... ... ... ನ್ಯಾಯಾಲಯದಲ್ಲಿ ಗುರುತಿಸುತ್ತೇನೆ." ಎಂದು ಮರುಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಸದರಿ ಮರುಹೇಳಿಕೆಯ ಭಾಗವನ್ನು ನಿ.ಪಿ.2 ಎಂದು ಗುರುತಿಸಲಾಯಿತು.

5. ನಾನು ಘಟನೆಯನ್ನು ಕಣ್ಣಾರೆ ಕಂಡು ನಿ.ಪಿ.1 ರಂತೆ ಹೇಳಿಕೆಯನ್ನು ಮತ್ತು 2 ನೇ ಆರೋಪಿಯನ್ನು ಗುರುತಿಸಿ ನಿ.ಪಿ.2 ರಂತೆ ಮರುಹೇಳಿಕೆಯನ್ನು ನೀಡಿದ್ದರೂ ಕೂಡ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ.ವಿ.ಜಿ. ವಕೀಲರಿಂದಃ-**

6. ಹನುಮಗಿರಿಯಿಂದ ಈಶ್ವರಮಂಗಲ ಹೊರಠಾಣೆಗೆ ಅರ್ಧ ಕಿ.ಮೀ. ದಾರಿ ಇದೆ. ಅಲ್ಲಿ ನನ್ನ ಸಹಿಯನ್ನು ಈ ಮೇಲೆ ಹೇಳಿದಂತೆ ಆಟೋದಲ್ಲಿ ಕರೆದುಕೊಂಡು ಬಂದು ಪೊಲೀಸರು ಪಡೆದಿದ್ದರು.

ಮರು ವಿಚಾರಣೆ ಃ ಇಲ್ಲ.

(ಸಾಕ್ಷಿದಾರರ ಹೇಳಿಕೆಯಂತೆ ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ, ಕೇಳಿ ಸರಿ ಇದೆ,

5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು ಕಾರ್ಯನಿರ್ವಹಣೆಃ ಪುತ್ತೂರು, ದ.ಕ.